## ಅಮರಾಪುರ ನರಸಜ್ಜ ಚಿತ್ರದುರ್ಗ



ದಿವಂಗತ ಅಮರಾಪುರ ನರಸಜ್ಜ ಚಿತ್ರದುರ್ಗ, ಆಂಧ್ರ ಸೀಮೆಯ ಗಡಿನಾಡಿನವನು. ಈತನ ಕಾಯಕ ಕತ್ತೆಗಳನ್ನು ಸಾಕುವುದು. ಇದ್ದ ಇಪ್ಪತ್ತು–ಮುವತ್ತು ಕತ್ತೆಗಳನ್ನು ಗೊಬ್ಬರಕ್ಕಾಗಿ ಬೇಸಾಯಸ್ತರ ಹೊಲಗದ್ದೆಗಳಲ್ಲಿ ಕೆಡೆ ಹಾಕಿದರೆ ಒಂದು ರಾತ್ರಿಗೆ ಒಂದು ಕತ್ತೆಗೆ ಬಾಡಿಗೆ ಐವತ್ತು ಪೈಸೆ, ಒಟ್ಟು ಹದಿನೈದು ರೂಪಾಯಿ ಸಂಪಾದನೆ. ಹೀಗಾಗಿ ನರಸಜ್ಜನದು ಅಲೆಮಾರಿ ಜೀವನ. ನಾಲ್ಕು ಮಕ್ಕಳ ಸಂಸಾರ ಅಮರಾಪುರದಲ್ಲೇ. ಅಜ್ಜಮಾತ್ರ ಒಂಟಿತನದ ಊರೂರ ಪ್ರಯಾಣದಲ್ಲಿ ಕತೆ ಹೇಳುವುದನ್ನು ಕಲಿತ. ಕತ್ತಲಾದರೆ ಊರ ಮನೆಗಳ ಜಗುಲಿಯಲ್ಲಿ, ಬೆಳದಿಂಗಳಾದರೆ ಆಚೆ ಬಯಲಲ್ಲಿ, ಮಳೆಯಾದರೆ ಗುಡಿ ಗುಂಡಾರಗಳಲ್ಲಿ ಮಂದಿ, ಮಕ್ಕಳ ಮುಂದೆ ಕತೆ ಹೇಳುತ್ತಿದ್ದ. ಎಂಬತ್ತು ವರ್ಷದ ಕಾಯಿಲೆ–ಕಸಾಲೆ ಇಲ್ಲದ, ಸುಖೀ ಜೀವನದ ನರಸಜ್ಜನದು. ಅವನು ಈ ಕತೆಯ ಸಂಗ್ರಹಕಾರರಿಗೆ ಸಿಕ್ಕಿದ್ದು ಪರಶುರಾಮಪುರ ಹೋಬಳಿಯ ವೇದಾವತಿ ನದಿ ತೀರದಲ್ಲಿ, ಸುಮಾರು 35 ವರ್ಷಗಳ ಹಿಂದೆ.

ಅಂತ ಬಿಟ್ಟರು. ಭದ್ರಗೊಮಾರ ಕೋಟೆ ಒಳಗಡೆ ಬಂದು ಒಬ್ಬ ಅಜ್ಜಿ ಮನೆ ಸೇರಿಕೊಂಡ. ಆ ಅಜ್ಜಿ ದಿನಾ ಅರಮನೆ ಕಡೆಗೆ ಹೂಪತ್ರೆ ಕೊಟ್ಟು ಬತ್ತಿದ್ಲು. ಒಂದು ದಿನ ಭದ್ರಗೊಮಾರ ಒಂದು ಚೀಟಿ ಬರೆದು ಅಜ್ಜಿ ಕೈಗೆ ಕೊಟ್ಟು ಅಜ್ಜಿ, ಅಜ್ಜಿ ಯಂಗಾದರೂ ಮಾಡಿ ಈ ಚೀಟಿನ ಪತ್ರೆ ಒಳಗಿಟ್ಟು ಅರಮನೆ ಒಳಗಡೆ ಆ ರುದ್ರಗೊಮಾರ ಕರೆತಂದಿರೋ ಹುಡುಗಿ ಕೈಗೆ ಮುಟ್ಟಿಸವ್ವ ಅಂತಂದ.